‘ಅಟೆಂಡರ್.’

‘ಎಲ್ಲಿದ್ದಾನೆ ಅಟೆಂಡರ್? ಕರೆಸಿ ಅವನನ್ನು.’

‘ಈಗ ಹೊರಗಡೆ ಹೋಗಿದ್ದಾನೆ.’

‘ನಿಮ್ಮ ಯಾವ ಅಟೆಂಡರೂ ಹೊರಗಡೆ ಹೋಗಿಲ್ಲ ಪ್ರೊಫೆಸರ್, ಎಲ್ಲರೂ ಇಲ್ಲೇ ಇದ್ದಾರೆ. ಆ ಹೊತ್ತು ನೀವು ಹೊರಗಡೆ ಹೋದದ್ದಂತೂ ನಿಜ. ಇಲ್ಲಿಗಲ್ಲ, ನಿಮ್ಮ ಮನೆಗೆ?’

‘ನೋ, ಇಂಪಾಸಿಬಲ್.’

‘ಸುಮ್ಮನೆ ಕಿರಚಾಡಬೇಡಿ. ನಾನು ಹೇಳುತ್ತೇನೆ, ಕೇಳಿ. ನಿಮಗೊಂದು ಸಮಸ್ಯೆಯಿದೆ. ಕೆಲವು ಕ್ಷಣ ನಿಮ್ಮನ್ನು ನೀವು ಮರೆಯುತ್ತೀರಿ. ಮರುಕ್ಷಣದಲ್ಲಿ ನಿಮಗೆ ಎಚ್ಚರವಾಗುತ್ತದಾದರೂ ಅಷ್ಟರೊಳಗೆ ಏನಾದರೊಂದು ನಡೆದು ಹೋಗಿರುತ್ತದೆ. ಕ್ಯಾಂಬ್ರಿನಾ ಯುನಿವರ್ಸಿಟಿಯಲ್ಲಿ ಸಂಭವಿಸಿದ್ದೂ ಅದೇ ಅಲ್ಲವೆ?’

‘ಮಿ. ನಟರಾಜ್!’

‘ಪ್ರೊ. ಗುಪ್ತಾ ಅವರು ಕೃತಿಚೌರ್ಯ ಮಾಡಿ ಪ್ರಕಟಿಸಿದ ನಿಮ್ಮ ಲೇಖನಗಳ ಮೂಲಪ್ರತಿಗಳು ನಮ್ಮ ಬಳಿ ಇವೆ. ಅದು ನಿಮ್ಮದೇ ಬರಹಗಳು ಎಂಬುದನ್ನು ಸಾಕ್ಷ್ಯಾಧಾರಗಳಿಂದ ರುಜುವಾತು ಮಾಡಿದ್ದೇವೆ. ಅಮೆರಿಕದ ಘಟನೆಯನ್ನು ಹಿಡಿದು ಡಾ. ಗುಪ್ತಾ ನಿಮ್ಮನ್ನು ಆಟವಾಡಿಸುತ್ತಿದ್ದರು. ಅವರಿಂದಲಾಗಿ ನೀವು ಪ್ರೊಫೆಸರ್ ಆಗುವುದಕ್ಕೆ ಸಾಧ್ಯವಾಗಲಿಲ್ಲ. ಅಲ್ಲವೇ ಭಾಸ್ಕರ್?’

‘.....’

‘ನಿಮ್ಮ ಡೈರಿಯಲ್ಲಿ ಪ್ರೊ. ಗುಪ್ತಾರ ಬಗ್ಗೆ ನೀವು ಬರೆದಿಟ್ಟ ಆಕ್ರೋಶದ ನುಡಿಗಳೇ ಅದಕ್ಕೆ ಸಾಕ್ಷಿ. ಡೈರಿಯನ್ನು ನೀವು ಊರು ಬಿಡುವುದಕ್ಕೆ ಮುನ್ನವೇ ನಮ್ಮವರು ವಶಪಡಿಸಿಕೊಂಡಿದ್ದರೂ ಅದರ ಬಗ್ಗೆ ನೀವು ಚಕಾರವೆತ್ತಲಿಲ್ಲ. ಸರಿನಾ ಭಾಸ್ಕರ್?’

‘...’

‘ಅವರು ವಿದೇಶೀ ಜರ್ನಲ್‌ಗಳಲ್ಲಿ ಪ್ರಕಟಿಸಿದ ನಿಮ್ಮ ಲೇಖನಗಳನ್ನು ಅವರ ಕಣ್ಣೆದುರಿಗೆ ಹಿಡಿದಿರಿ. ಅವರು ಕೂಗಾಡುವ ಮೊದಲೇ ನೀವವರ ಬಾಯಿ ಮುಚ್ಚಿದಿರಿ. ಕತ್ತು ಹಿಚುಕಿ ಕೊಂದಿರಿ. ಮರುಕ್ಷಣದಲ್ಲಿ ನಿಮಗೆ ಎಚ್ಚರವಾಯಿತು. ನೋಡಬೇಕಿದ್ದರೆ ಪ್ರೊ. ಗುಪ್ತಾ ಸತ್ತಿದ್ದರು. ಇನ್ನೇನು ಗತಿ ಎಂದು ಯೋಚಿಸಿದಿರಿ. ಲ್ಯಾಬ್‌ನಲ್ಲಿ ಯಾರೂ ಇರಲಿಲ್ಲ. ನಿಮಗೆ ಹೊಳೆದದ್ದು ಒಂದೇ ಉಪಾಯ. ಗ್ಯಾಸ್ ಸಿಲಿಂಡರಿನ ಹತ್ತಿರದಲ್ಲಿ ರಂಜಕವನ್ನು ತೆರೆದಿಟ್ಟು, ಗ್ಯಾಸ್ ಲೀಕ್ ಆಗುವಂತೆ ಮಾಡಿಟ್ಟು ಹೊರಗಡೆ ಓಡಿ ಬಂದು ಕ್ಯಾಂಟೀನಿನಲ್ಲಿ ಕುಳಿತು ಚಹಾ ಕುಡಿಯತೊಡಗಿದಿರಿ. ಅಷ್ಟರಲ್ಲಿ ಲ್ಯಾಬಿನಿಂದ ಭೀಕರ ಸ್ಫೋಟದ ಸದ್ದು ಕೇಳಿತು. ಲ್ಯಾಬ್‌ನ ಒಳಗಡೆ ಡಾ. ಗುಪ್ತಾ ಚಿಂದಿ ಚಿಂದಿಯಾಗಿದ್ದರು!

‘ಮೂರನೆಯ ಬಾರಿ ಭೂತದ ಕೋಲದ ದಿನ. ಪವನ್‌ನ ಗೆಳೆಯ ನಿಮ್ಮ ಮೇಲೆ ಹಾರಿ ಬೀಳುವುದಕ್ಕೆ ಯತ್ನಿಸಿದಾಗ ನೀವವನನ್ನು ಕೆಳಕ್ಕೆ ಹಾಕಿ ಅವನ ಕತ್ತನ್ನು ಬಲವಾಗಿ ಹಿಚುಕಿದಿರಿ. ಯಾರೋ ಒಬ್ಬ ‘ಅಯ್ಯೋ ಸತ್ತ’ ಎಂದು ಬೊಬ್ಬೆ ಹಾಕಿದಾಗಷ್ಟೆ ನಿಮಗೆ ಎಚ್ಚರವಾಯಿತು. ಅವ ಸತ್ತನೆಂದೇ ತಿಳಿದು ನೀವು ಓಡಿಹೋದಿರಿ.

‘ಇದೀಗ ನಾಲ್ಕನೆಯ ಬಾರಿ. ಶೀಲಾ ಮನೆಯಲ್ಲಿ ಒಬ್ಬರೇ ಇದ್ದರು. ಯಾರೋ ಹೊರಗಡೆಯಿಂದ ಆ ಕತ್ತಲೆಯಲ್ಲಿ ಚಲಿಸುತ್ತಿದ್ದಂತೆ ಕಂಡು ಹೆದರಿದ ಶೀಲಾ ಮೊದಲು ಡಾ. ಗಣೇಶರಿಗೆ ಫೋನ್ ಮಾಡಿ ‘ದೀಪೂ ನಿಮ್ಮ ಮನೆ ಕಡೆ ಬಂದಿದ್ದಾನೆಯೇ’ ಎಂದು ವಿಚಾರಿಸಿದರು. ಬಳಿಕ ನಿಮಗೆ ಫೋನ್ ಮಾಡಿ ‘ತನಗೆ ಅತೀವ ಹೆದರಿಕೆ ಆಗುತ್ತಿದೆ, ದೀಪೂ ಕೂಡ ಸರಿಯಿಲ್ಲ; ಬೆಳಗ್ಗೆ ಹೋದವನು ಬಂದೇ ಇಲ್ಲ’ ಎಂದರು.

ನೀವು ‘ಈಗ ಬರಲಾಗುವುದಿಲ್ಲ’ ಎಂದಿರಿ, ಮರುಕ್ಷಣದಲ್ಲಿ ದೀಪೂ ಸರಿಯಿಲ್ಲ ಎಂದದ್ದು, ಮನೆಗೆ ಬಂದಿಲ್ಲ ಎಂದದ್ದು, ಪವನ್ ಅವಳ ಹಿಂದೆ ಸುತ್ತಾಡುವ ಅಜನೆಯಾಗುತ್ತಿದೆ ಎಂದದ್ದು ನೆನಪಿಗೆ ಬಂದು, ತಕ್ಷಣ ಮನೆಗೆ ಹೋಗಬೇಕೆನಿಸಿತು. ಮನಸ್ಸು ಕೇಳದೆ ಮಧ್ಯದಲ್ಲಿ ಎದ್ದು ಹೋದಿರಿ. ಮನೆಗೆ ತಲುಪುತ್ತಿದ್ದಂತೆಯೆ ಮುಂಬಾಗಿಲು ಒಳಗಡೆಯಿಂದ ಹಾಕಿದ್ದು ಕಂಡು ಬಂತು. ಒಳಗಡೆಯಿಂದ ಪಿಸುದನಿ ಕೇಳಿಸಿತು. ದೀಪೂ ಒಳಗಡೆ ಇದ್ದಾನೆಂಬುದು ನಿಮ್ಮ ಖಚಿತ ವಿಶ್ವಾಸವಾಗಿತ್ತು. ಆತನ ಬೆಳವಣಿಗೆಯನ್ನು ಮೊದಲಿನಿಂದಲೂ ನೀವು ಗಮನಿಸುತ್ತಿದ್ದಿರಿ. ಬಾಗಿಲು ಬಡಿದಾಗ ಯಾರೂ ಬಾಗಿಲು ತೆರೆಯಲಿಲ್ಲ. ನಿಮ್ಮೊಳಗಿನ ರಕ್ಕಸ ಮೇಲೆದ್ದ. ಶಕ್ತಿ ಪ್ರಯೋಗಿಸಿ ಬಾಗಿಲನ್ನು ಗುದ್ದಿ, ಮೆಟ್ಟಿ ಚಿಲಕ ಮುರಿದಿರಿ. ಒಳಗೆ ಬಂದಾಗ ಶೀಲಾ ಒಬ್ಬಳೇ ಹೆದರಿ ನಿಂತಿದ್ದಳು.

ಹಿಂಬಾಗಿಲು ತೆರೆದಿತ್ತು. ಏನಾಯಿತೆಂದು ಕೇಳುವ ವ್ಯವಧಾನ ನಿಮಗಿರಲಿಲ್ಲ. ತನಗೆ ದ್ರೋಹ ಮಾಡಿದ ಆಕೆಯನ್ನು ಮುಗಿಸಿ ಬಿಡಬೇಕೆಂಬುದೊಂದೇ ನಿಮಗೆ ತೋರಿದ್ದು, ‘ಆನ್ ಎ ಇಂಪಲ್ಸ್’ ಸಮಸ್ಯೆ ನಿಮ್ಮದು. ನೀವಾಕೆಯ ಕತ್ತು ಹಿಚುಕಿ ಕೊಂದಿರಿ!’

‘ಯೂ ಬಾಸ್ಟರ್ಡ್’ ಪ್ರೊ. ಭಾಸ್ಕರ್ ಅಟ್ಟಹಾಸ ಮಾಡುತ್ತ ವಿಸ್ಕಿ ಬಾಟಲಿಯನ್ನು ಲಟಾರನೆ ಮೇಜಿಗೆ ಬಡಿದು ಛಿದ್ರ ಮಾಡಿದರು.

ನಟರಾಜ್ ಹಿಂದಕ್ಕೆ ತಿರುಗಿದವರೇ, ‘ಇನ್ಸ್‌ಪೆಕ್ಟರ್, ಅರೆಸ್ಟ್ ಹಿಮ್’ ಎಂದರು. ಮೊಬೈಲ್ ಆಫ್ ಮಾಡಿ ಜೇಬಿಗಿಳಿಸಿದ ನಟರಾಜ್, ಎದ್ದು ಹೊರನಡೆದರು.

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in

## ಕಳೆದ ಸಂಚಿಕೆಯಲ್ಲಿ

ದೀಪು ಕೇರಳದಲ್ಲಿರುವ ಸುಳಿವು ಸಿಕ್ಕಿತು. ಅವನನ್ನು ಪತ್ತೆ ಹಚ್ಚಲಿಕ್ಕಾಗಿ ಕೇರಳಕ್ಕೆ ಹೋಗುತ್ತಿರುವುದಾಗಿ ನಟರಾಜ್ ಪಟ್ಟಣಶೆಟ್ಟಿ ಅವರು ಹೇಳಿದಾಗ, ತಾವೂ ಜೊತೆಗೆ ಬರುವುದಾಗಿ ಪ್ರೊ. ಭಾಸ್ಕರ್ ಪಟ್ಟುಹಿಡಿದರು. ಪೊಲೀಸರಿಂದ ನ್ಯಾಯ ದೊರೆಯುವ ನಿರೀಕ್ಷೆ ತಮಗಿಲ್ಲದೆ ಇರುವುದರಿಂದ, ತಾವು ಖುದ್ದಾಗಿ ವಹಿಸಿ ಅಪರಾಧಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕೆಂದು ಭಾಸ್ಕರ್ ವಿನಂತಿಸಿಕೊಂಡರು. ನಟರಾಜ್ ಅವರು ಕೇರಳದ ತಲಚೇರಿಗೆ ಪ್ರಯಾಣ ಬೆಳೆಸಿದರು. ಅಲ್ಲಿನ ಪೊಲೀಸರ ಸಹಾಯ ಪಡೆದು ದೀಪೂಗೆ ಬಲೆ ಬೀಸತೊಡಗಿದರು. ದೀಪೂನ ದೂರದ ಸಂಬಂಧಿ ಮಥಾಯಿಯಿಂದ ಒಂದಷ್ಟು ವಿಷಯ ತಿಳಿಯಿತು. ತಲಚೇರಿಯ ಹೋಟೆಲೊಂದರಲ್ಲಿ ದೀಪು ಕೆಲಸ ಮಾಡುತ್ತಿರುವುದರ ವಿಷಯ ತಿಳಿದ ನಟರಾಜ್, ತಾನು ಹುಡುಕುತ್ತಿರುವ ವ್ಯಕ್ತಿ ಹೆಣ್ಣು–ಹೆಂಡ ಸಂಬಂಧಿತ ಹೋಟೆಲ್‌ನಲ್ಲಿ ಇರಬಹುದೆಂದು ಊಹಿಸಿದರು. ಹೋಟೆಲ್ ಪತ್ತೆ ಹಚ್ಚಿ ಅಲ್ಲಿ ಹೋಗಿ ವ್ಯೂಹ ರಚಿಸಿದ ನಟರಾಜ್ ಅವರಿಗೆ ದೀಪು ಎದುರಾದ. ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ, ಹೋಟೆಲ್ ಸುತ್ತುವರಿದ ಪೊಲೀಸರ ಕಣ್ತಪ್ಪಿಸಿ ಪಾರಾಗುವ ಸಾಧ್ಯತೆಯೇ ಇರಲಿಲ್ಲ. ದೀಪು ಬೇರೆ ದಾರಿಯಿಲ್ಲದೆ ಶರಣಾದ.

**ಹೊಸ ಧಾರಾವಾಹಿ**

## ಆಸ್ಕರ್ ವೈಲ್ಡನ ನೈಟಿಂಗೇಲ್

ಚಿನ್ನದ ಚಮಚೆಯನ್ನು ಬಾಯಿಯಲ್ಲಿಟ್ಟುಕೊಂಡು ಹುಟ್ಟಿದ ಸೋನಾಲಾಲ್‌ನಿಗೆ ಬಿದ್ದ ಕನಸೊಂದು ಅವನು ಆಸ್ಕರ್ ವೈಲ್ಡ್ ಎಂದು ಹೆಸರು ಬದಲಿಸಿಕೊಳ್ಳಲು ಕಾರಣವಾಯಿತು. ಸಾಹಿತ್ಯದ ವಿದ್ಯಾರ್ಥಿ ಆಸ್ಕರ್, ಕನಸಿನಲ್ಲಿ ಕಂಡ ಚೆಲುವೆಯನ್ನು ಹುಡುಕುತ್ತಾ ಕಂಡದ್ದೇನು? ಅವನಿಗೆ ಎದುರಾದ ಚೆಲುವೆಯರು ಕಲಿಸಿದ ಪಾಠಗಳೇನು? ಕನಸಿನ ಬೆನ್ನತ್ತಿದ ಆಸ್ಕರ್‌ನ ಈ ಕಥನ ಮುಂಬೈನ ನಗರದ ಬೀದಿ–ಬಜಾರುಗಳಿಂದ ಲಾಸ್‌ವೇಗಾಸ್‌ನ ಸ್ವಪ್ನಲೋಕದ ಓಣಿಗಳಲ್ಲಿ ಓದುಗರನ್ನು ಕೈಹಿಡಿದು ನಡೆಸುವಷ್ಟು ಪರಿಣಾಮಕಾರಿಯಾಗಿ.

ಹಿರಿಯ ಕಾದಂಬರಿಕಾರ ಕೇಶವರೆಡ್ಡಿ ಹಂದ್ರಾಳರ ಹೊಸ ಕಥನ ‘ಆಸ್ಕರ್ ವೈಲ್ಡನ ನೈಟಿಂಗೇಲ್ಸ್’.

**ಮುಂದಿನ ವಾರದಿಂದ...**